International Journal of Kannada Research
www.kannadajournal.com

**ISSN: 2454–5813**
IJSR 2017; 3(1): 05-11
© 2017 IJKS
www.kannadajournal.com
Received: 24-11-2016
Accepted: 25-12-2016

**ಸಂಶೋಧನಾ ವಿದ್ಯಾರ್ಥಿ**
**ಶ್ರೀ ಶಂಕರ ಎಸ್ ಕೋಳಿ**
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

**ಮಾರ್ಗದರ್ಶಕರು**
**ಡಾ. ಅಶೋಕ ನರೋಡೆ**

**Correspondence**
**ಶ್ರೀ ಶಂಕರ ಎಸ್ ಕೋಳಿ**
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯನ ಸಂಸ್ಥೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ

# ಅವರಖೋಡ ಗ್ರಾಮ – ಹಣುಮಂತದೇವರ ಮಹಿಮೆ

**ಶ್ರೀ ಶಂಕರ ಎಸ್ ಕೋಳಿ, ಸಂಶೋಧನಾ ವಿದ್ಯಾರ್ಥಿ, ಡಾ. ಅಶೋಕ ನರೋಡೆ, ಮಾರ್ಗದರ್ಶಕರು**

ಅವರಖೋಡ ಎಂಬ ಗ್ರಾಮ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಿಂದ ಸು.12 ಕಿ.ಮಿ ಅಂತರದ ಕೃಷ್ಣಾ ನದಿಯ ದಂಡೆಯ ಮೇಲಿದೆ. ಈ ಗ್ರಾಮದಲ್ಲಿ ನೆಲೆಸಿರುವ ಹಣುಮಂತ ದೇವರು ಈ ಊರಿನ ಅದಿದೈವತೆಯಾಗಿದ್ದಾನೆ. ಈ ದೇವಾಲಯ ಪುರಾಣ ಪುಣ್ಯ ಸ್ಥಳಗಳಲ್ಲಿ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಈ ದೇವಾಲಯಕ್ಕೆ ಹಲವಾರು ವರ್ಷಗಳ ಇತಿಹಾಸವಿದೆ. ಪುರಾಣ ಪುಣ್ಯ ಕ್ಷೇತ್ರಗಳು ದೇಶದ ನಾನಾ ಭಾಗಗಳಲ್ಲಿ ಪ್ರಖ್ಯಾತಿಯನ್ನು ಪಡುದುಕೊಂಡಿವೆ. ಆದರೆ ಈ ಅವರಖೋಡ ಗ್ರಾಮದ ಹಣುಮಂತ ದೇವರು ಎಲೆಯ ಮರೆಯ ಕಾಯಿಯಂತೆ ತನ್ನ ಸಾನಿಧ್ಯದಲ್ಲಿ ಬಂದ ಭಕ್ತರ ಸಂಕಷ್ಟಗಳನ್ನು ಪರಿಹರಿಸುತ್ತಾ ದೇಶ–ವಿದೇಶದ ಭಕ್ತರ ಗಮನವನ್ನು ಸೆಳೆದಿದ್ದಾನೆ. ಒಂದು ನೋವಿನ ಸಂಗತಿ ಏನೆಂದರೆ ಪ್ರಖ್ಯಾತಿ ಪಡೆದ ಈ ದೇವರ ಮಹಿಮೆಯನ್ನು ಯಾರು ಕೂಡಾ ಬರವಣಿಗೆಯಲ್ಲಿ ತಂದಿಲ್ಲ.

ಪ್ರವೇಶ:

ಅವರಖೋಡ ಗ್ರಾಮದ ಕೃಷ್ಣಾ ನದಿಯ ದಡದಲ್ಲಿ ನೆಲೆಸಿರುವ ಹಣುಮಂತ ದೇವರ ಮಹಿಮೆಯನ್ನು ಸ್ಥಳ ಪುರಾಣದ ಹಿನ್ನಲೆ, ಐತಿಹ್ಯ–ದಂತಕಥೆ, ಕ್ಷೇತ್ರ ಕಾರ್ಯದ ಮೂಲಕ ಪಡೆದ ಮಾಹಿತಿಯಿಂದ ಈ ದೇವತೆಯ ಮಹಿಮೆಯನ್ನು ವಿವರಿಸಲು ಮುಂದೆ ಸಾಗುತ್ತೇನೆ. ಕೇಲವು ನನ್ನ ಓದುಗ ಮಿತ್ರರಿಗೆ ಮುಂದೆ ವಿವರಿಸಿದ ಮಹಿಮೆಯನ್ನು ನೋಡಿದರೆ ಹಲವಾರು ಪ್ರಶ್ನೆಗಳು ಅವರ ಮನದಾಳದಲ್ಲಿ ಹೋಳೆಯುತ್ತವೆ. ಅದರಂತೆ ಇದು ಸಾಧ್ಯವೇ ಎಂದು ಮೂಢನಂಬಿಕೆ ಎಂದು ಕೈತೊಳೆದುಕಳ್ಳುತ್ತಾರೆ. ಆದರೆ ನಿಜವಾದ ಪ್ರಜ್ಞಾವಂತ ಓದುಗರು, ಭಕ್ತರು ಪ್ರಾಯೋಗಿಕವಾಗಿ ನೋಡಿದಾಗ ಭಕ್ತರ ಮನದಾಳದ ವಿಷಯವನ್ನು ಪ್ರತ್ಯಕ್ಷವಾಗಿ ಕೇಳಿದಾಗ ಇದು ಸತ್ಯ ನೈಜ್ಯ ಸಂಗತಿ ಎಂದು ಒಪ್ಪಿಕೋಳ್ಳುತ್ತಾರೆ.

**ವಿವರಣೆ**

ನಮ್ಮ ದೇಶದ ನಾನಾ ಮಹಾನ ಗ್ರಂಥಗಳಲ್ಲಿ ಉಲ್ಲೇಖಿತಗೊಂಡ ಹಣುಮಂತನ ಮಹಿಮೆಯನ್ನು ನೋಡಿದ್ದೇವೆ. ಅದರಂತೆ ಇಲ್ಲಿ ತಿಳಿಯಪಡಿಸುವ ವಿಷಯ ರಾಮಾಯಣಕ್ಕೂ ಅದರಲ್ಲಿ ಬರುವ ಹಣುಮಂತನ ಪಾತ್ರ. ರಾಮಾಯಣದಲ್ಲಿ ಬರುವ ಹಣುಮಂತ ಈ ದಕ್ಷಿಣ ಭಾರತದಲ್ಲಿ ಬರುವ ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಅವರಖೋಡ ಗ್ರಾಮದಲ್ಲಿ ಹರಿಯುತ್ತಿರುವ ಕೃಷ್ಣಾ ನದಿಯ ದಂಡೆಯ ಮೇಲೆ ಸ್ವಯಂಭೂವಾಗಿ ಏಕೆ ನೆಲೆಸಿದ, ಭಕ್ತರನ್ನು ಯಾವ ರೀತಿಯಾಗಿ ಆಕರ್ಷಣೆ ಮಾಡಿದ. ಈ ದೇಶದಲ್ಲಿ ಹಲವಾರು ರಾಜ್ಯಗಳು ಅದರಲ್ಲಿ ಬರು ಜಿಲ್ಲೆಗಳು, ತಾಲೂಕುಗಳಲ್ಲಿ ಬರುವ ಊರುಗಳಲ್ಲಿ ಎಷ್ಟೋ ಹಣುಮಂತನ ದೇವಾಲಯಗಳಿದ್ದರೂ ಈ ಅವರಖೋಡದ ಹಣುಮಂತ ದೇವರು ಪ್ರಖ್ಯಾತಿಯನ್ನು ಹೊಂದಲು ಕಾರಣವೇನು ಎಂಬುದನ್ನು ಸಂಶೋಧನೆಯ ಕನ್ನಡಿಯ ಮೂಲಕ ಪ್ರಾಯೋಗಿಕವಾಗಿ ನೋಡಬಹುದಾಗಿದೆ.

ಅವರಖೋಡ ಎನ್ನುವ ಪದ ಅಗರಖೇಡ ಎಂಬ ಪದದಿಂದ ಅಪಬ್ರಂಶಗೊಂಡು ಅವರಖೋಡ ಎಂದಾಗಿದೆ ಎಂದು ಉಲ್ಲೇಖಿಸಬಹುದು. ನೂರಾ ವರ್ಷಗಳ ಹಿಂದೆ ಈ ಊರು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿರಬಹುದು. ಈ ಗ್ರಾಮದಲ್ಲಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಇದರ ಇತಿಹಾಸವನ್ನು ಅವಲೋಕಿಸಿದಾಗ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕಿಯವಾಗಿ, ಧಾರ್ಮಿಕವಾಗಿ ಮೂಲ ಬದಲಾವಣೆಗಳು ಅಲ್ಪ ಸ್ವಲ್ಪ ಬದಲಾವಣೆಯಾಗಿವೆ. ಒಂದು ಐತಿಹ್ಯದ

ಪ್ರಕಾರ ಈ ಊರಿನಲ್ಲಿ ಸಾಮಾಜಿಕವಾಗಿ ಅಲ್ಪ ಪ್ರಮಾಣದ ಜಾತಿ ಜನಾಂಗದವರು ವಾಸವಾಗಿದ್ದಾರೆ. ಇಲ್ಲಿ ಒಂದು ಕಿರಾಣಿ ಅಂಗಡಿ ಇದೆ. ಊರಲ್ಲಿ ಮಧ್ಯಪಾನ, ಮಾಂಸಾಹಾರ ಯಾವುದು ನಡೆಯೋದಿಲ್ಲ. ಕುಂಬಾರ, ಕಮ್ಮಾರ, ಚಮ್ಮಾರ, ಬಡಗಿ, ಕ್ಷೌರಿಕರು ಈ ಸಮುದಾಯಗಳು ಊರಲ್ಲಿ ಆವಾಗಲೂ ಇಲ್ಲ ಇವಾಗಲೂ ಇಲ್ಲ. ಇದಕೆಲ್ಲ ಕಾರಣ ಹನುಮಂತ ದೇವರ ಮಹಿಮೆ.

ಈ ದೇವಾಲಯ ಜಾಗೃತ ದೇವಾಲಯಗಳಲ್ಲಿ ಒಂದು. ದೇಶದ ನಾನಾ ಭಾಗಗಳಿಂದ ಭಕ್ತ ಸಮೂಹವು ಇಲ್ಲಿಗೆ ಬರುತ್ತಾರೆ. ಈ ದೇವರ ವಾರ ಶನಿವಾರ. ಈ ದಿವಸದಂದು ಸಾವಿರಾರು ಭಕ್ತರು ಬಂದು ದೇವರಿಗೆ ತಮ್ಮ ಕಷ್ಟವನ್ನು ಸೂಚಿಸಿ ಪರಿಹರಿಸಿಕೊಳ್ಳುತ್ತಾರೆ. ಭಕ್ತರು ಏನೇ ಬೇಡಿಕೊಂಡರು ಆ ಬೇಡಿಕೆಗಳು ಅತೀ ಕಡಿಮೆ ಅವಧಿಯಲ್ಲಿ ಈಡೆರುತ್ತವೆ. ಆದರಿಂದ ಈ ದೇವಾಲಯ ಪ್ರಖ್ಯಾತಿಯನ್ನು ಪಡೆದುಕೊಂಡಿದೆ.

ಈ ಜಿಲ್ಲೆಯಲ್ಲಿ ಬರುವ ತಾಲೂಕಿನ ಹಲವಾರು ಹಳ್ಳಿಗಳಲ್ಲಿ ಹಣುಮಂತನ ದೇವಾಲಯಗಳಿದ್ದರು ಅಲ್ಲಿ ಒಂದೊಂದು ಜನಾಂಗದವರು ಅವರದೇ ಆದ ಒಂದು ದೇವತೆಗೆ ಸಿಮಿತವಾಗಿರುತ್ತಾರೆ ಆದರೆ ಈ ಊರಿನ ಹಣುಮಂತನ ದೇವಾಲಯಕ್ಕೆ ಬರುವ ಹಾಗೂ ಊರಿನ ಎಲ್ಲಾ ಜಾತಿ-ಜನಾಂಗದವರು ಬೇಧ ಭಾವವಿಲ್ಲದೆ ಸಾವಿರಾರು ಭಕ್ತರು ಸಾಗರೋಪಾದಿಯಲ್ಲಿ ಬರುತ್ತಾರೆ.

ಈ ಗ್ರಾಮದಲ್ಲಿ ಸ್ವಯಂಭೂ ಮೂರ್ತಿಯಾಗಿ ನೆಲೆಸಿರುವ ಹಣುಮಂತ ದೇವರು ಹಲವಾರು ವರ್ಷಗಳಿಂದ ಹರಿದು ಬಂದ ಭಕ್ತರ ಅನೇಕ ರೀತಿಯ ಕಷ್ಟ ಕಾರ್ಪಣ್ಯಗಳನ್ನು ನೆರವೇರಿಸುತ್ತಾನೆ ಎಂಬ ನಂಬಿಕೆ ಇಲ್ಲಿ ಭಕ್ತ ಸಮೂಹದ್ದಾಗಿದೆ. ಇಲ್ಲಿ ವರ್ಷ ಪೂರ್ತಿ ನಡೆಯುವ ಹಬ್ಬಗಳಾದ ದೀಪಾವಳಿ, ಮಹಾನವಮಿ, ಯುಗಾದಿಯಂದು ಈ ದೇವಾಲಯದಲ್ಲಿ ವಿರ್ಜಂಭನೆಯಿಂದ ದೇವರ ಪಾಲಿಕಿ ಸೇವೆ ಹಾಗೂ ಕಾರ್ತಿಕೋತ್ಸವ ಜರಗುತ್ತದೆ. ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ದೇವಾಲಯಕ್ಕೆ ಬಂದು ದರ್ಶನ ಪಡೆಯುತ್ತಾರೆ. ದಿನಂ ಪ್ರತಿ ಮಂಜಾನೆ ಬ್ರಾಹ್ಮಣ ಪೂಜಾರಿಗಳು ನದಿಯಿಂದ ನೀರನ್ನು ತಂದು ಪೂಜೆ, ಆರತಿ, ಮಂಗಳಾರತಿ, ಹಣುಮಂತನ ಸಹಶ್ರನಾಮಾವಳಿ, ಅಭಿಷೇಕ ಮಾಡುತ್ತಾರೆ. ಇನ್ನು ವರ್ಷದ ಎಪ್ರೀಲ್ ತಿಂಗಳಲ್ಲಿ ಬರುವ ದವಲದ ಹಿಣ್ಣಿಮೆಯೆಂದು ಜಾತ್ರೆ ನಡೆಯುತ್ತದೆ. ಆವತ್ತು ಸುರ್ಯೋದಕ್ಕಿಂತ ಮುಂಚೆ ದೇವಾಲಯದಲ್ಲಿ ಐದು ಬ್ರಾಹ್ಮಣ ಮುತ್ತೈದೆಯ ಹೆಣ್ಣು ಮಕ್ಕಳು ಬೆಳ್ಳಿಯ ತೊಟ್ಟಿಲು ಕಟ್ಟಿ ಅದರಲ್ಲಿ ಹಣುಮಂತನ ಮೂರ್ತಿ ಇಟ್ಟು ದೇವರಿಗೆ ಹೆಸರಿಡುವ ಕಾರ್ಯಕ್ರಮ ಪ್ರತಿ ವರ್ಷ ನಡೆಯುತ್ತದೆ. ಅನಂತರ ಬ್ರಾಹ್ಮಣ ಪುರೋಹಿತರು ಪೂಜಾ ಕಾರ್ಯದಲ್ಲಿ ತೋಡಗುತ್ತಾರೆ. ಭಕ್ತರು ಮಡಿ ಹಾಗೂ ದಿಡು ನಮಸ್ಕಾರ ಕೃಷ್ಣಾ ನದಿಯಿಂದ ದೇವಾಲಯದವರೆಗೆ ಹಾಕಿ ತಾವು ಬೇಡಿಕೊಂಡ ಹರಕೆಯನ್ನು ಸಲ್ಲಿಸುತ್ತಾರೆ. ಆನಂತರ ಪ್ರಸಾದ, ಕಲೆ-ಸಂಸ್ಕೃತಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ದಿನವಿಡಿ ನಡೆಯುತ್ತವೆ.

ಈ ಗ್ರಾಮ ಪುರಾತನವಾದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಇಲ್ಲಿ ನೂರಾರು ವರ್ಷಗಳ ಆದಿಮಾನವನ ಅವಶೇಷಗಳು ಹಾಗೂ ಅವನು ಬಳಸುತ್ತಿದ್ದ ಸಲಕರಣೆಗಳು, ಬಾದಾಮಿ ಚಾಲುಕ್ಯರ ಶೈಲಿಯ ಶಿಲ್ಪಗಳು ಈ ಗ್ರಾಮದಲ್ಲಿ ಅವಿತುಕೊಂಡಿವೆ. ನಾನು ನೋಡಿದ ಪ್ರಕಾರ ಇಲ್ಲಿ ಐತಿಹಾಸಿಕ ಭೂ ಉತ್ಖನನ ಮಾಡಿದರೆ ಗ್ರಾಮದ ಇತಿಹಾಸ, ಪೌರಾಣಿಕ ವಿಷಯಗಳಿಗೆ ಸಂಬಂಧ ಪಟ್ಟ ಎಷ್ಟೋ ಮಾಹಿತಿಯು ಲಭ್ಯವಾಗಬಹುದು ಎಂಬ ನಂಬಿಕೆ ಇದೆ.

ಈ ರೀತಿಯಾಗಿ ಅವರಖೋಡ ಗ್ರಾಮದ ಐತಿಹಾಸಿ ಇತಿಹಾಸ ಇಲ್ಲಿ ನೆಲೆಸಿರುವ ಸ್ವಯಂಭೂ ಪವಾಡ ಪುರುಷ ಹಣುಮಂತ ದೇವರ ಮಹಿಮೆಯನ್ನು ಭಕ್ತರು ಪ್ರಾಯೋಗಿಕವಾಗಿ ಒಪ್ಪಿಕೊಂಡು ಲಕ್ಷಾಂತರ ಭಕ್ತರು ಪ್ರತಿ ವರ್ಷ ದೇವರ ದರ್ಶನವನ್ನು ಪಡೆಯುತ್ತಾರೆ. ಅದರಂತೆ ಎಲೆಯ ಮರೆಯ ಕಾಯಿಯಂತೆ ಇರುವ ಈ ಗ್ರಾಮ ಕರ್ನಾಟಕ ಗೇಜೆಟಿಯರ ಹಾಗೂ ಬೆಳಗಾವಿ ಜಿಲ್ಲಾ ಗೇಜೆಟಿಯರದಲ್ಲಿ ಇದರ ಉಲ್ಲೇಖ ಸೇರ್ಪಡೆಯಾಗಬೇಕೆಂಬುದು ನನ್ನ ಆಶಯ ಅದರೊಂದಿಗೆ ಇಲ್ಲಿ ಐತಿಹಾಸಿಕ ಸಂಶೋಧನೆಗಳು ನಡೆದು ಅವರಖೋಡ ಗ್ರಾಮದ-ಹಣುಮಂತ ದೇವರ ಮಹಿಮೆ ಪ್ರಕಟಗೊಳ್ಳಬೇಕು.